ಸಮಿತಿಯನ್ನು ನಂತರ ಪ್ರಕಟಣೆ ಮಾಡುತ್ತೇನೆ. ಈಗ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

ನಿಲುವಳಿ ಸೂಚನೆಗಳು

1. ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬವು ನಡೆದಿರತಕ್ಕ ಸಂದರ್ಭದಲ್ಲಿ ಇಬ್ಬರು ಅಮಾಯಕರು ಸತ್ತಿರುವುದು.

+ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಡುವುದಾದರೆ ಬಹಳ ಮುಖ್ಯವಾಗಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಹುಬ್ಬಳ್ಳಿಯಲ್ಲಿ ಇವತ್ತು ಹೋಳಿಹಬ್ಬವು ನಡೆದಿರತಕ್ಕ ಸಂದರ್ಭದಲ್ಲಿ ಘರ್ಷಣೆಯಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಇವರಿಗೆ ಬರೀ ಇದೇ ಆಯಿತು. ಇವರಿಂದ ದೇಶ ನಾಶವಾಯಿತು. ಬರೀ ಹುಬ್ಬಳ್ಳಿಯ ವಿಚಾರವನ್ನೆ ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ ದಯಮಾಡಿ ಕೇಳಿ, ವಿರೋಧ ಪಕ್ಷದ ನಾಯಕರಿಗೆ ಈ ಸದನದಲ್ಲಿ ವಿಶಿಷ್ಟವಾದ ಸ್ಥಾನವಿದೆ. ದಯಮಾಡಿ ಕುಳಿತುಕೊಳ್ಳಿ. ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಲು ನಿಂತುಕೊಂಡಿರುವಾಗ ತಾವು ಆ ರೀತಿ ಮಾತನಾಡತಕ್ಕದ್ದು ಸರಿಯಲ್ಲ. ನೀವು ಮಾತನಾಡತಕ್ಕ ಅವಶ್ಯಕತೆ ಇದ್ದರೆ ಅಗತ್ಯ ಬಿದ್ದಾಗ ತಮಗೂ ಸಹ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ವಿರೋಧಪಕ್ಷದ ನಾಯಕರ ಸ್ಥಾನವೇನಿದೆ ಅದನ್ನು ಆ ರೀತಿ ನೋಡತಕ್ಕದ್ದು ಈ ಸದನಕ್ಕೆ ಗೌರವ ತರತಕ್ಕದ್ದಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ತಿಳಿದಿರುವಂತೆ ನಾವು ಈಗ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇವೆ.

MR. SPEAKER : He is just mentioning it. It is not being discussed.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಅನಂತರ ಅವಕಾಶ ಮಾಡಿಕೊಡಬಹುದು. ಅವರು ಹೇಳುತ್ತಿರುವುದು ಇದಕ್ಕೆ ಸಂಬಂಧಪಡುವುದಿಲ್ಲ. ಕಾನೂನು ಸುವ್ಯವಸ್ಥೆಯ ಬಗ್ಗೆ ವಿಚಾರ ಮಾಡಿದಾಗ ಅವರು ಸಹ ಮಾತನಾಡಬಹುದು.

MR. SPEAKER : I will hear him for two minutes. I am coming to it.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ಕರ್ತವ್ಯವನ್ನು ಮಾಡಲು ನಿಂತಿದ್ದೇನೆ. ತಾವು ಅದಕ್ಕೆ ಅಪ್ಪಣೆಯನ್ನು ಕೊಟ್ಟಿದ್ದೀರಿ. ಅದು ಸರಿಯಿಲ್ಲವೆಂದರೆ ಕಡತದಿಂದ ತೆಗೆಸಿ ಹಾಕಿ. ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಘರ್ಷಣೆಯಾಗಿದೆ. ಇಬ್ಬರು ಅಮಾಯಕರು ಸತ್ತಿದ್ದಾರೆ. ಮೂವತ್ತು ಜನರು ಗಾಯಗೊಂಡು ಕೆಎಂಸಿ ಆಸ್ಪತ್ರೆಗೆ ಸೇರಿದ್ದಾರೆ. ಗೃಹಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆಂದು ಸುದ್ದಿ ಇದೆ. ಕಾನೂನು ಸುವ್ಯವಸ್ಥೆಯು ತೊಂದರೆಯಾಗಿದೆ, ಏನು ಬೇಕಾದರೂ ಅನಾಹುತವಾಗಬಹುದು. ಸಭಾನಾಯಕರಿದ್ದಾರೆ, ವಾಸ್ತವಿಕವಾದ ಸ್ಥಿತಿ ಏನು? ಸರ್ಕಾರವಿದೆಯೋ ಅಥವಾ ಇಲ್ಲವೋ ಎನ್ನತಕ್ಕ ಪರಿಸ್ಥಿತಿ ರಾಜ್ಯದ ಜನರಿಗೆ ತಿಳಿಯುವುದು ಬೇಡ. ಏನಾದರೂ ಸುದ್ದಿ ಇದ್ದರೆ ಸದನದ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅಗತ್ಯವಿರುವುದರಿಂದ ಕೇಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಮಾತ್ರವಲ್ಲ, ಕಾನೂನು ಸುವ್ಯವಸ್ಥೆ ಇಡೀ ರಾಜ್ಯದಲ್ಲಿ ಅದರ ಅಗತ್ಯವಿದೆ. ನಿಲುವಳಿ ಸೂಚನೆ ಎಂದರೆ ಸದನದ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ತಕ್ಷಣ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ತರಲಾಗಿದೆ. ಅದರಲ್ಲಿ ಇದೂ ಸಹ ಬರುತ್ತದೆ. ಆಗ ಸಮಗ್ರವಾಗಿ ಇದರ ಬಗ್ಗೆ ಸಹ ಉತ್ತರವನ್ನು ಕೊಡಲಿ. ಇಡೀ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ. ಕ್ಯಾಬಿನೇಟ್ ಮಂತ್ರಿಗಳಾದ ನಬಿಯವರೆ ಸ್ವತಃ ಅವರ ಮೇಲೆ ಸಹ ಪೋಲೀಸ್ ದೌರ್ಜನ್ಯವಾಗಿದೆ, ಅನೇಕ ಜನರಿಗೆ ಹೊಡೆದಿದ್ದಾರೆ, ಪೋಲೀಸ್ ಮತ್ತು ಜ್ಯುಡಿಶಿಯಲ್ ಕಸ್ಟಡಿಯಲ್ಲಿ ಹಾಕಿದ್ದಾರೆಂದು ಪ್ರೆಸ್ ಕಾನ್‌ಫರನ್ಸ್‌ನಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದೇ ರೀತಿ ಹುಬ್ಬಳ್ಳಿಯದ್ದು ಸಹ ಒಂದು. ಅದೊಂದೇ ಅಲ್ಲ ರಾಜು ಆಚಾರ್ಯರವರಿಗೆ ಹೊಡೆದಿರುವ ವಿಚಾರವಿದೆ, ಡಕಾಯಿತಿಯ ವಿಚಾರವಿದೆ, ದರೋಡೆಯ ವಿಷಯವಿದೆ ಇವೆಲ್ಲಾ ವಿಚಾರಗಳೂ ಸಹ ಸದನದ ಮುಂದೆ ಬರುತ್ತವೆ. ಅದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಟ್ಟರೆ ಈ ಹುಬ್ಬಳ್ಳಿಯ ವಿಚಾರದ ಬಗ್ಗೆ ಅವರು ವಿವರವಾದ ಮಾಹಿತಿಯನ್ನು ಕೊಟ್ಟರೆ ಅದಕ್ಕೆ ಸಮಗ್ರವಾದ ಉತ್ತರವನ್ನು ಕೊಡಲು ಅವರಿಗೆ ಅವಕಾಶವಾಗುತ್ತದೆ. ಮತ್ತು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ದಯಮಾಡಿ ನಾವು ನಿಯಮ 60ರ ಕೆಳಗೆ ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಅದಕ್ಕೆ ಅಪ್ಪಣೆಯನ್ನು ಕೊಟ್ಟರೆ ಒಳ್ಳೆಯದು ಮತ್ತು ಚರ್ಚೆಗೆ ಸಹ ಅವಕಾಶವಾಗುತ್ತದೆ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಹೋದ ಸಲ ಅಧಿವೇಶನ ನಡೆಯುವಾಗ ರೈಲು ಅಪಘಾತವಾಯಿತು. ಆ ರೀತಿ ಸಭೆಯು ನಡೆಯತಕ್ಕ ಸಮಯದಲ್ಲಿ ಏನಾದರೂ ಅನಾಹುತವಾದರೆ ಅದರ ಬಗ್ಗೆ ತಿಳಿದುಕೊಳ್ಳಬೇಕೆಂದು ಎಲ್ಲರಿಗೂ ಆತುರವಿರುತ್ತದೆ. ನಿಲುವಳಿ ಸೂಚನೆಯಲ್ಲಿ ಬರುವುದು ಬೇರೆ ವಿಚಾರ. ಇದು ಚರ್ಚೆಯು ವಿಚಾರವೇ ಅಲ್ಲ, ಕೇವಲ ಮಾಹಿತಿ ಅಷ್ಟೆ. ವಾಸ್ತವಿಕವಾಗಿ ಇಂಥ ಸಮಯದಲ್ಲಿ ಸರ್ಕಾರದವರೆ ವಾಲೆಂಟರಿಯಾಗಿ ಮಾಹಿತಿಯನ್ನು ಒದಗಿಸಬೇಕು, ಅವರು ಒದಗಿಸದಿದ್ದರೆ ನಾವು ಕೇಳುತ್ತೇವೆ ಅಷ್ಟೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ತಮ್ಮ ಅನುಮತಿಯನ್ನು ಪಡೆದು ಒಂದು ವಿಚಾರವನ್ನು ಸಭೆಯ ಗಮನಸೆಳೆದಿದ್ದಾರೆ. ಅವರ ವಿಚಾರದ ಬಗ್ಗೆ ಸರ್ಕಾರದಿಂದ ಬಂದಿರುವ ವರದಿಯ ಹಿನ್ನೆಲೆಯಲ್ಲಿ ನಾವೇನು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ಹೇಳುತ್ತೇನೆ. ಇವತ್ತು ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಕೊನೆಯ ದಿನದ ಮೆರವಣಿಗೆಯು ಸುಮಾರು 1-45ರ ಸಮಯದಲ್ಲಿ ಮುಲ್ಲಾ ಓಣಿಯ ಮಾಸ್ಕ್‌ನ ಹತ್ತಿರದ ಕಮರಿಪೇಟೆಯಲ್ಲಿ ಹೋಗುತ್ತಿರುವಾಗ ಹಿಂದು ಮತ್ತು ಮುಸ್ಲಿಂರ ನಡುವೆ ಘರ್ಷಣೆಯಾಗಿದೆ. ಚಾಕುವಿನಿಂದ ಇರಿದುದರಿಂದ ಒಬ್ಬರು ಅಮಾಯಕರು ಸತ್ತಿದ್ದಾರೆ, ಅನಂತರ ಪೋಲೀಸ್‌ನವರು ಗೋಲೀಬಾರ್ ಮಾಡಿದ್ದರಿಂದ ಒಬ್ಬರು ಅಮಾಯಕರು ಸತ್ತಿದ್ದಾರೆ. ಗೋಲೀಬಾರ್‌ನ್ನು ಮಾಡಲು ಕಾರಣವೇನೆಂದರೆ: ಚಾಕುವನ್ನು ಇರಿದ ಮೇಲೆ ಜನರು ಆಟೋರಿಕ್ಷ ಮತ್ತು ಸ್ಕೂಟರ್‌ಗಳಿಗೆ ಬೆಂಕಿಯನ್ನು ಹಾಕಲು ಪ್ರಾರಂಭವಾಗಿ ಘರ್ಷಣೆ ಜಾಸ್ತಿಯಾದಾಗ ಪೋಲೀಸರು ಗೋಲೀಬಾರ್ ಮಾಡಿದರು.

ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಅಲ್ಲಿಗೆ ಗೃಹ ರಾಜ್ಯ ಮಂತ್ರಿಗಳನ್ನು ವಿಜಿಪಿ ಮತ್ತು ಅಡಿಷನಲ್ ವಿಜಿಪಿಗಳನ್ನು ಈಗಾಗಲೆ ಕಳಿಸಿಕೊಟ್ಟಿದ್ದೇನೆ. ಬಹುಶಃ ನಾಳೆ ಅವರು

ಬಂದಮೇಲೆ ಇದರ ಬಗ್ಗೆ ಪೂರ್ಣವಾದ ಮಾಹಿತಿಯನ್ನು ಸಭೆಯ ಮುಂದಿಡಲು ಸಿದ್ಧರಿದ್ದೇವೆ. ಇದರ ಜೊತೆಗೆ ಮತ್ತೊಂದು ಮಾತನ್ನು ಹೇಳಬಯಸುವುದೇನೆಂದರೆ, ಆ ಒಣಿಯಲ್ಲಿ ಮೆರವಣಿಗೆ ಹೋಗಲು ಯಾವ ಅಧಿಕಾರಿಗಳು ಅವಕಾಶ ಮಾಡಿಕೊಟ್ಟರು? ಆ ಪ್ರದೇಶ ಸೂಕ್ಷ್ಮ ಪ್ರದೇಶವೆಂಬ ಅರಿವು ಅವರಿಗೆ ಇರಲಿಲ್ಲವೆ?

ಈ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಒಂದು ಮಾತನ್ನು ಹೇಳುತ್ತೇನೆ. ಅಧಿಕಾರಿಗಳು ತಮ್ಮ ಸ್ಥಾನದಲ್ಲಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುವಾಗ ಅವರು ಮುಂದಾಲೋಚನೆ ಇಲ್ಲದೆ ಆ ಜಾಗದಲ್ಲಿ ಇಂತಹ ಘಟನೆ ಆಗಬಹುದು ಎಂದು ಅರಿವು ಇದ್ದೂ ಕೊಟ್ಟಿದ್ದಾರೆ. ಅವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಹಿಂದು ಮುಂದು ನೋಡುವುದಿಲ್ಲ ಎಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿ ವರ್ಷ ಆ ಬೀದಿಯಲ್ಲಿ ಹೋಳಿ ಹಬ್ಬದ ಮೆರವಣಿಗೆ ಹೋಗುತ್ತಿತ್ತೋ! ಅಥವಾ ಈ ವರ್ಷ ಅಲ್ಲಿ ಹೋಗಿದೆಯೋ? ಈಗ ಕಳೆದ ಆರು ತಿಂಗಳಿಂದ ಈಚೆಗೆ ನಡೆದಿರತಕ್ಕ ವಿದ್ಯಾಮಾನಗಳನ್ನು ಅರಿತಿದ್ದು, ಗೊತ್ತಿದ್ದೂ, ಈ ಹಿರಿಯ ಅಧಿಕಾರಿಗಳು ಈ ನಿರ್ಣಯವನ್ನು ಮಾಡಿದದುದು ಪರ್ಮಿಷನ್ ಕೊಟ್ಟಿದ್ದುದು, ಅಲ್ಲಿ ಹೋಗಿದ್ದುದು ಈ ಘಟನೆ ಆಗಿದ್ದರೆ ಅದರ ಮೇಲೆ ಅಧಿಕಾರಿಗಳು ಎಷ್ಟರ ಮಟ್ಟಿಗೆ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ ಎನ್ನುವುದನ್ನು ಮತ್ತು ಸಂಪೂರ್ಣವಾದ ವಿವರವನ್ನು ತೆಗೆದುಕೊಂಡು ಬರುವುದಕ್ಕೆ ನಾನು ಡಿ.ಜಿ.ಪಿ.ಯವರಿಗೆ ಹೇಳಿದ್ದೇನೆ. ಇದರಲ್ಲಿ ಅಧಿಕಾರಿಗಳೇನಾದರೂ ಸ್ವಲ್ಪ ಮಟ್ಟಿಗೆ ತಮ್ಮ ಜವಾಬ್ದಾರಿಯಿಂದ ಸರಿಯಾಗಿ ಕೆಲಸ ಮಾಡಿಲ್ಲ ಎನ್ನುವ ಅರಿವು ಸರ್ಕಾರಕ್ಕೆ ಬಂದರೆ, ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಾಗೇಗೌಡ : ದೇವರ ಮೆರವಣಿಗೆ ಹೋಗುತ್ತತ್ತೋ ಅಥವಾ ಹೋಳಿ ಮೆರವಣಿಗೆ ಹೋಗುತ್ತಿತ್ತೋ ಈ ಬೀದಿ ಆ ಬೀದಿ The Government by its action, they are alienating the section of the society.

ಶ್ರೀ ಹೆಚ್.ಡಿ. ದೇವೇಗೌಡ : ಈ ಮೆರವಣಿಗೆ ಕಳುಹಿಸುವಾಗ should they not have sufficient force? Is it not the responsibility of the officer?

ಅದಕ್ಕೆ ನಾನು ಡಿ.ಜಿ.ಪಿ. ಮತ್ತು ನಮ್ಮ ಹೋಂ ಸೆಕ್ರೆಟರಿಯವರಿಗೆ ಏಕೆ ಕಳುಹಿಸಿದೆ ಅಂದರೆ ಸರಿಯಾದ ವ್ಯವಸ್ಥೆ ಇಲ್ಲದೆ ಹೋದರೆ that is dereliction of duty of an officer. ನಾನು ಈ ಸಭೆಗೆ ಮಾಹಿತಿ ಕೊಡುವಾಗ ಎಲ್ಲಾ ವಿವರಗಳನ್ನು ತೆಗೆದುಕೊಂಡು ಬರಬೇಕು ಎಂದು ಹೇಳುವುದರ ಉದ್ದೇಶ ಇಷ್ಟೇ. I want to place the entire facts before the House.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಮ್ಮಿಡಿಯೇಟ್ ಆ ಒಂದು ಕೆಲಸ ಮಾಡಬೇಕಾಗಿದ್ದು, ಅಲ್ಲಿ ಮೂರು ಸರ್ಕಲ್ ಇನ್‌ಸ್ಪೆಕ್ಟರ್ ಹುದ್ದೆಗಳು ಖಾಲಿ ಇವೆ. ತಕ್ಷಣ ಅದನ್ನು ತುಂಬಿ. ಈ ದೇಶದಲ್ಲಿ ಎಲ್ಲರೂ ಅಣ್ಣ ತಮ್ಮಂದಿರಂತೆ ಬಾಳಿ ಬದುಕುವ ಅವಕಾಶ ಇದೆ, ಹಬ್ಬ - ಹರಿದಿನ ಆಚರಿಸುವ ಅವಕಾಶ ಇದೆ. ಈ ರಸ್ತೆಯಲ್ಲಿ ಹೋಗಬಾರದು ಅದಕ್ಕೆ ಪೊಲೀಸರು ಅನುಮತಿ ಕೊಟ್ಟಿದ್ದರೆ ನೀವು ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಿ. ಈ ಮಾತು ಸಭಾನಾಯಕರು ತಮ್ಮಿಂದ ಬಾರದೆ ಅದಕ್ಕೆ ಸೂಕ್ತವಾದ ಬಂದೋಬಸ್ತು ಮಾಡಬೇಕು. ಅದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡಬೇಕು ಇಲ್ಲದೆ ಇದ್ದರೆ ಇದು ಬೇರೆ ಅಪಾರ್ಥಕ್ಕೆ ಅವಕಾಶವಾಗುತ್ತದೆ. ಈ ಸಂದರ್ಭದಲ್ಲಿ ದಯಮಾಡಿ ಅದಕ್ಕೋಸ್ಕರ ಯಾರು ಕಾನೂನು ಕೈಗೆ

ತೆಗೆದುಕೊಂಡಿದ್ದಾರೆ, ಯಾರೇ ಇರಬಹುದು ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿಗೆ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಬೇಕು. ಇಲ್ಲಿ ತದ್ವಿರುದ್ಧವಾಗಿ ಯೋಚನೆ ಮಾಡಬೇಕು. ಮೆರವಣಿಗೆ ಬರುತ್ತದೆ ಎಂದು ಗೊತ್ತಿದ್ದಾಗ, ಆ ಮೆರವಣಿಗೆ ಶಾಂತಿಯುತವಾಗಿ ಆಗುವುದಕ್ಕೆ ಅವಕಾಶ ಮಾಡದೆ ಅದಕ್ಕೆ ಬೇಕಾಗಿರತಕ್ಕ ರಕ್ಷಣೆ ಕೊಡದೆ ಇರತಕ್ಕ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಯಾರು ಡಿ.ಐ.ಜಿ. ಮಂಡೇಗಾರ್ ಇದ್ದಾರೆ ಇವರು ಅವತ್ತಿನಿಂದ ಇವತ್ತಿನವರೆಗೂ ಇದೇ ರೀತಿ ನಡೆದುಕೊಂಡು ಹೋಗುತ್ತಿದ್ದಾರೆ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವ ಧೈರ್ಯ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೋಳಿ ಹಬ್ಬದ ಮೆರವಣಿಗೆ ಅವಕಾಶ ಕೊಟ್ಟಿದ್ದುದು ತಪ್ಪು ಎಂದು ಹೇಳಲಿಲ್ಲ. ಕೊಡುವುದಕ್ಕೆ ಮುಂಚೆ ಮುನ್ನೆಚ್ಚರಿಕೆ ವಹಿಸಿ ಸರಿಯಾದ ಬಂದೋಬಸ್ತು ಮಾಡದೆ ಸಫಿಷಿಯಂಟ್ ಫೋರ್ಸ್‌ನ್ನು ಇಟ್ಟುಕೊಳ್ಳದೆ ಆತ ಮೆರವಣಿಗೆ ಅವಕಾಶ ಕೊಟ್ಟಿದ್ದರೆ ಅದು ತಪ್ಪು. ನಾಳೆ ಬೆಳಿಗ್ಗೆ ಎಲ್ಲಾ ತನಿಖೆ ಮಾಡಿಸಿ ನನ್ನ ಅಭಿಪ್ರಾಯ ಹೇಳುತ್ತೇನೆ. ನನಗೆ ಎಲ್ಲಾ ಮಾಹಿತಿಗಳು ಬಂದ ಮೇಲೆ ಸದನದ ಮುಂದೆ ನಾಳೆ ಎಲ್ಲಾ ವಿಷಯಗಳನ್ನು ವಿಶ್ಲೇಷಣೆ ಮಾಡುತ್ತೇನೆ. ನಾನು ಏಕೆ ಇದನ್ನು ಬ್ಯಾನ್ ಮಾಡಲಿ. ಇಡೀ ರಾಜ್ಯದಲ್ಲಿ ಹೋಳಿ ಹಬ್ಬ ಇಷ್ಟು ದಿವಸ ಶಾಂತಿಯುತವಾಗಿ ಚೆನ್ನಾಗಿ ನಡೆಯಿತು. ಕೊನೆಯ ಗಳಿಗೆಯಲ್ಲಿ ಇಂತಹ ದುರದೃಷ್ಟಕರ ಘಟನೆ ನಡೆದರೆ ನಮಗೂ ಸಮಾಧಾನ ಇಲ್ಲ, ಯಾರಿಗೂ ಸಮಾಧಾನ ಇಲ್ಲ. ನಾನು ಈ ಕಡೆ ಆ ಕಡೆ ಎಂದು ವಾದ ಮಾಡುತ್ತಿಲ್ಲ. If the officer has failed in his responsibility then I cannot keep quiet. I will come before the House tomorrow.

ಅಧ್ಯಕ್ಷರು : ನಿಮಯ 60ರ ಕೆಳಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲರರು ಒಂದು ನಿರ್ಣಯ ಕಳುಹಿಸಿದ್ದಾರೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸನ್ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮತ್ತು ಕೆಲವರು ಇನ್ನೊಂದು ಸೂಚನೆಯನ್ನು ಸಹ ಕೊಟ್ಟಿದ್ದಾರೆ. ನಾನು ನಿನ್ನೆ ತಮ್ಮ ಜೊತೆ ಎಲ್ಲಾ ಚರ್ಚೆ ಮಾಡಿದ್ದೇನೆ. ಶ್ರೀಮಾನ್ ವಾಟಾಳ್ ನಗಾರಾಜ್‌ರವರು ಸುಮಾರು ಎರಡು ಗಂಟೆ ಕಾಲ ಚರ್ಚೆ ಮಾಡಿದ್ದಾರೆ. ತಾವು ಈಗಾಗಲೇ ಪ್ರಸ್ತಾಪ ಮಾಡಿದಿರಿ. ಮುಖ್ಯಮಂತ್ರಿಗಳು ನಿರ್ದೇಶನ ಮಾಡುತ್ತಾರೆ ಎಂದು ಆ ಕಾರಣಕ್ಕಾಗಿ ನಾನು ಸ್ಪಷ್ಟೀಕರಣ ಕೊಡಬೇಕಾಗಿದೆ. ನಿನ್ನೆ ವಾಟಾಳ್ ನಾಗರಾಜ್‌ರವರು ನನ್ನ ಜೊತೆ ಮಾತನಾಡುವ ವಿಷಯ ಮುಖ್ಯಮಂತ್ರಿಗಳಿಗೆ ಗೊತ್ತಿರಲಿಲ್ಲ. ನನ್ನ ಖಚಿತವಾದ ಅಭಿಪ್ರಾಯ ತಮಗೂ ಕೂಡ ನಾನು ಹೇಳಿದ್ದೇನೆ. ನಾವು ಹೊಸ ಸಂಪ್ರದಾಯಗಳನ್ನು, ಸಾದು ಇಲ್ಲದೆ ಇರತಕ್ಕಂತಹ ಸಂಪ್ರದಾಯಗಳನ್ನು ಹಾಕುವುದಕ್ಕೆ ತಯಾರಾಗಿಲ್ಲ.

ಶ್ರೀ ಬಿ.ಎ. ಯಡಿಯೂರಪ್ಪ : ತಾವು ಮುಂದೆ ಹೋಗುವುದಕ್ಕೆ ಮುಂಚೆ ತಾವು ಇದಕ್ಕೆ ಅನುಮತಿಯನ್ನು ಕೊಟ್ಟ ನಂತರ ನಾನು ಪ್ರಸ್ತಾಪ ಮಾಡುತ್ತೇನೆ. ಇದುವರೆಗೆ ಇಲ್ಲಿ ನಡೆದುಕೊಂಡು ಬಂದಿರತಕ್ಕಂತಹ ಸತ್ಸಂಪ್ರದಾಯಗಳು ಎಂದರೆ, ಈ ರೀತಿ ನಿಲುವಳಿ ಸೂಚನೆ ಇದ್ದಾಗ ಅದರ ಮಹತ್ವ ಏನು, ಅದರ ಉದ್ದೇಶ ಏನು, ಅದರ ಅರ್ಜೆನ್ಸಿ ಏನು ಎಲ್ಲಾ ಕಾರ್ಯಕ್ರಮಗಳನ್ನು ಬದಿಗೊತ್ತಿ ಇದನ್ನು ಏಕೆ ತೆಗೆದುಕೊಳ್ಳಬೇಕು ಎಂಬುದನ್ನು ತಮ್ಮನ್ನ ಕನ್‌ವಿನ್ಸ್ ಮಾಡುವ ಪ್ರಯತ್ನ ಆದಮೇಲೆ ಮೊದಲು ತಮಗೆ ಇದು ಸರಿಯಲ್ಲ ಎಂದು ಅನ್ನಿಸಿದರೆ ನಿಲುವಳಿ ಸೂಚನೆಯ ರೂಪದಲ್ಲಿ ತರುವ ಅಗತ್ಯವಿಲ್ಲ. ಬೇರೆ ರೀತಿಯಲ್ಲಿ ತರಬೇಕೆಂದು

ಹೇಳುವುದಾದರೆ ನನ್ನದು ಏನೂ ಅಭ್ಯಂತರ ಇಲ್ಲ. ತಮ್ಮ ಆದೇಶವನ್ನು ಪರಿಪಾಲನೆ ಮಾಡಿಯೇ ಮಾಡುತ್ತೇನೆ. 12 ವರ್ಷಗಳಲ್ಲಿ ನಾನು ಶಾಸಕನಾಗಿ ಕೆಲಸ ಮಾಡಬೇಕಾದರೆ ಈ ರೀತಿ ನಿಲುವಳಿ ಸೂಚನೆ ಬಂದಾಗ ದಿವಸಗಟ್ಟಲೆ ಚರ್ಚೆಯಾಗಿ ತಳ್ಳಾಡಿದ್ದೂ ಉಂಟು. ಪ್ರಿಲಿಮಿನರಿ ಸಬ್‌ಮಿಷನ್ ಸಂದರ್ಭದಲ್ಲಿ ತಮಗೆ ಇದು ಸೂಕ್ತ ಎಂದು ಕಂಡುಬದಂರೆ ಮಾಡಿ. ನಾನು ಈಗ ಇಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ನಮ್ಮ ಶಾಸಕರು ಕರ್ತವ್ಯ ನಿರ್ವಹಿಸುವುದಕ್ಕೆ ಆಗದೆ ಇರತಕ್ಕಂತಹ ಮತ್ತು ಉಸಿರು ಕಟ್ಟುವಂತಹ ಒಂದು ವಾತಾವರಣದಲ್ಲಿ ನಾವು ಇದ್ದೇವೆ. ನಮ್ಮ ಹಕ್ಕು ಭಾದ್ಯತೆಗಳು ಏನು? ವಿರೋಧ ಪಕ್ಷದ ನಾಯಕನಾಗಿ ಅಲ್ಲ, ಇಡೀ 224 ಜನ ಶಾಸಕರು ನಮಗೆ ಬೇಕಾದ ಮಾಹಿತಿಗಳು ಮತ್ತು ಇತರೆ ವಿವರಗಳು ಸಿಕ್ಕುವುದಿಲ್ಲ. ತಮ್ಮ ಮೂಲಕ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದರಿಂದ ತಾವು ರೂಲಿಂಗ್ಸ್ ಕೊಟ್ಟರೆ ತಾವು ತೀರ್ಮಾನ ತೆಗೆದುಕೊಂಡರೆ 224 ಜನ ಶಾಸಕರು ತಮಗೆ ಪತ್ರ ಬರೆಯಬೇಕು, ತಾವು ಬೇಕಾದಂತಹ ಎಲ್ಲಾ ಅಂಕಿ ಅಂಶಗಳನ್ನು ತಾವು ಕೊಡುತ್ತೇವೆಂದು ಹೇಳಿದಿರಿ. ನಾವು ಮುಂದೆ ಹೋಗುವುದಿಲ್ಲ.

ಅಧ್ಯಕ್ಷರು : ಡೀಟೇಲ್ಸ್ ಬೇಡ ನಾನು ತಮಗೆ ಅದನ್ನೇ ಹೇಳುತ್ತಿದ್ದೇನೆ. ಮೂಲಭೂತವಾಗಿ ನಾನೂ ಕೂಡ ಒಬ್ಬ ಶಾಸಕ. ಶಾಸಕರ ಹಕ್ಕು ಸುರಕ್ಷಿತವಾಗಿ ಇರಬೇಕು, ಶಾಸಕರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಶಾಸಕರು ತಮ್ಮ ಕರ್ತವ್ಯ ನಿರ್ವಹಣೆಗೆ ಯಾವ ಅಡ್ಡಿ ಆತಂಕಗಳು ಇರಬಾರದು ಎನ್ನುವುದರಲ್ಲಿ ನನ್ನದು ಎರಡು ಅಭಿಪ್ರಾಯವಿಲ್ಲ. ನಾನು ಆ ಕಾರಣಕ್ಕಾಗಿ ತಮಗೆ ಹೇಳಿದೆ ಪ್ರಸ್ತಾವನೆ ಮಾಡುವುದಕ್ಕೋಸ್ಕರ ಮಾಡುವುದು ಬೇಡ. ಈ ನಿಯಮದ ಕೆಳಗೆ ಇದನ್ನು ತೆಗೆದುಕೊಳ್ಳುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. 69ರ ಕೆಳಗೆ ತೆಗೆದುಕೊಳ್ಳೋಣ. ಹೆಚ್ಚು ಸಮಯ ಇದಕ್ಕಾಗಿ ಬಳಸೋಣ. ಸರ್ಕಾರದಿಂದ ಕೂಡ ನಿಗಧಿತವಾದ ಉತ್ತರವನ್ನು ನಾವು ಪಡೆದುಕೊಳ್ಳೋಣ ಅಥವಾ ಬೇರೆ ಯಾವುದೇ ನಿಯಮದ ಕೆಳಗೆ ತೆಗೆದುಕೊಂಡರೆ ಇನ್ನು ಹೆಚ್ಚು ಉಪಯುಕ್ತವೆಂದು ತಾವು ಹೇಳುವುದಾದರೆ ನಾನು ತಮ್ಮೆಲ್ಲರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸಭಾ ನಾಯಕರೊಂದಿಗೆ ಮಾತನಾಡಿ ನಾನು ಹೇಳುವುದಕ್ಕೆ ತಯಾರಾಗಿದ್ದೇನೆ. ಈ ಚರ್ಚೆ ತಪ್ಪಿಸಬೇಕು ಎಂದು ನನ್ನ ಅಭಿಪ್ರಾಯವಿಲ್ಲ. ಅಥವಾ ಈ ಚರ್ಚೆ ತಪ್ಪಿಸಿದರೆ ವಂಚಿತನಾಗುವವನು ನಾನೇ. ನೀವು ವಿರೋಧ ಪಕ್ಷದಲ್ಲಿದ್ದೀರಿ ಅವರು ಆಡಳಿತ ಪಕ್ಷದಲ್ಲಿದ್ದಾರೆ. ನಾನು ಎರಡೂ ಪಕ್ಷಗಳಲ್ಲೂ ಇಲ್ಲ. ನನಗೆ ಇದು ಬಹಳ ಮುಖ್ಯವಾಗಿ ಆಗಬೇಕಾಗಿರುವಂತಹ ಕೆಲಸ. ಶಾಸಕರ ಗೌರವ ಘನತೆ ಅವರ ಸವಲತ್ತುಗಳನ್ನು ಎಲ್ಲಾವನ್ನೂ ರಕ್ಷಣೆ ಮಾಡತಕ್ಕಂಥಾದ್ದು. ಆದ್ದರಿಂದ ದಯಮಾಡಿ ಅನ್ಯಥಾ ಭಾವಿಸಬೇಡಿ. ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಇದು ಯಾವುತ್ತೋ ತೆಗೆದುಕೊಳ್ಳಬೇಕು, ಮುಂದಕ್ಕೆ ಹಾಕಬೇಕು ಅಂತ ಅಲ್ಲ. ಆದ್ದರಿಂದ ದಯಮಾಡಿ ತಾವು ಕೊಟ್ಟಿರತಕ್ಕಂತಹ ನಿಯಮ 60ರ ಕೆಳಗೆ ಇರತಕ್ಕಂಥಾದ್ದು ಸೂಚನೆ ಏನು ಇದೆ, ಅದನ್ನು ಕೈ ಬಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಮಲ್ಲಿಕಾರ್ಜುನ ಖರ್ಗೆಯವರು ಏನು ಕೊಟ್ಟಿದ್ದಾರೋ ಪ್ರಸ್ತಾವಿಕವಾಗಿ ತಾವು ಏನು ಹೇಳಬೇಕೆಂದಿದ್ದೀರಿ ದಯಮಾಡಿ ಅದನ್ನು ಶುರು ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಕಳುಹಿಸಿದ್ದ ನಿಲುವಳಿ ಸೂಚನೆಯನ್ನು ನಾಳೆ ಯಾವ ರೀತಿ ತೆಗೆದುಕೊಳ್ಳುತ್ತೀರಿ ಎಂಬುದನ್ನು ಈಗಲೇ ಹೇಳಿ ಬಿಡಿ,

ಅಧ್ಯಕ್ಷರು : 69ರ ಕೆಳಗೆ ತೆಗೆದುಕೊಳ್ಳೋಣ. ಇದನ್ನು ತಪ್ಪಿಸಬೇಕೆಂದು ನಮ್ಮಲ್ಲಿ ಉದ್ದೇಶ ಇಲ್ಲದೆ ಇರುವುದರಿಂದ 69ರ ಕೆಳಗೆ ತೆಗೆದುಕೊಳ್ಳೋಣ. ಸನ್ಮಾನ್ಯ ನಂಜೇಗೌಡರು ಹೇಳಲಿ.

ಶ್ರೀ ಹೆಚ್.ಎನ್. ನಂಜೇಗೌಡ : 159 ಪ್ರಕಾರ ತೆಗೆದುಕೊಳ್ಳೋಣ. ಏಕೆ ನಿಮಗೆ ಡಿಸ್ಕ್ಯೂಟ್ ಬರಡು ದಿವಸ ತೆಗೆದುಕೊಳ್ಳಿ, ಒಂದು ದಿವಸ ತೆಗೆದುಕೊಳ್ಳಿ, ಅಥವಾ ಅರ್ಧ ದಿವಸ ತೆಗೆದುಕೊಳ್ಳಿ. ಟೈಮ್ ಲಿಮಿಟ್ ಇಲ್ಲ. ಅದು ನಿಮಗೆ ಬಿಟ್ಟದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಈ ಸದನದ 224 ಜನ ಶಾಸಕರಿಗೆ ಸಂಬಂಧಪಟ್ಟ ವಿಷಯ.

ಶ್ರೀ ಹೆಚ್.ಡಿ.ದೇವೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಹಿರಿಯ ಮುಖಂಡರನ್ನು ಕರೆಯಿಸಿ ಯಾವ ವ್ಯಾಪ್ತಿ ಒಳಗೆ ತೆಗೆದುಕೊಳ್ಳಬೇಕೆಂದು ಚರ್ಚೆ ಮಾಡಿ, ನಿರ್ಣಯ ಮಾಡಿ ನೀವು ಯಾವ ನಿರ್ಣಯವನ್ನು ಮಾಡುತ್ತೀರೋ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ ದೊಡ್ಡ ವ್ಯಾಖ್ಯಾನ ಬೇಡ. ನಾವೆಲ್ಲಾ ನಾಳೆ ತೆಗೆದುಕೊಳ್ಳಬೇಕೆಂದರೆ, ನಾಳೆ ಹುಬ್ಬಳ್ಳಿ ವಿಷಯ ಬಂದರೆ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತದೆ. ಪ್ರಿಲಿಮಿನರಿ ಸಬ್‌ಮಿಷನ್ ಅಂತ ಹೇಳಿದರೂ ಚರ್ಚೆ ಆಗುತ್ತದೆ. ನಿಮಗೆ ಗೊತ್ತಿರುವ ವಿಷಯ, ನಮಗೆ ಗೊತ್ತಿರುವ ವಿಷಯ ಲಾ ಅಂಡ್ ಆರ್ಡರ್ ವಿಷಯ. ನನ್ನದು ಏನೂ ತಕರಾರು ಇಲ್ಲ ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳಿ ನನ್ನದು ಏನೂ ಅಡ್ಡಿ ಇಲ್ಲ. ಯಾವ ರೂಲ್ ಕೆಳಗೆ ತೆಗೆದುಕೊಳ್ಳುತ್ತೀರಿ ತೆಗೆದುಕೊಳ್ಳಿ.

ಅಧ್ಯಕ್ಷರು : ನಂಜೇಗೌಡರು ಹೇಳಿದ ಹಾಗೆ 159 ರ ಕೆಳಗೆ ತೆಗೆದುಕೊಂಡರೆ ಅಲ್ಪ ಕಾಲ ಚರ್ಚೆಯಾಗುತ್ತದೆ. ಇಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಹೇಳುತ್ತೀರೋ ಅದರ ಮೇಲೆ ನಮಗೆ ನಂಬಿಕೆ ಇದೆ. ಕೆಲಸ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ಈ ವಿಷಯ ನಾವೆಲ್ಲಾ ಅಂದರೆ ನಮ್ಮ 40 ಜನ ಶಾಸಕರು ಸೇರಿ ಕುಳಿತು ಗವರ್ನರ್ ಅಡ್ರಸ್‌ಗೆ ಒಳಗೆ ಬರುವುದು ಬೇಡ ಎಂದು ಚರ್ಚೆ ಮಾಡಿ ನಿರ್ಧಾರ ತೆಗೆದುಕೊಂಡು ಒಳಗೆ ಬಂದಾಗ, ಅದಕ್ಕೆ ಬೇರೆಯದೇ ಆದ ಒಂದು ಸ್ವರೂಪ ಕಾಣಿಸಿಕೊಂಡಿತು.

4.40 ಪಿ.ಎಂ.

ನಾವು ರಾಜ್ಯಪಾಲರ ಭಾಷಣ ಆದಾಗ ನಮ್ಮ ಕರ್ತವ್ಯ ಎಂದು ಗೌರವದಿಂದ ಇಲ್ಲಿ ಬಂದು ಕುಳಿತೆವು. ನಾವುಏನು ಮಾಡಬೇಕು ತಾವು ನಮಗೆ [illegible] ನಾವು ಇಲ್ಲಿ ಯಾವ ನಿಯಮಗಳ ಅಡಿಯಲ್ಲಿ ಕೆಲಸ ಮಾಡಬೇಕು. ನಮಗೆ 12 ವರ್ಷಗಳಿಂದ ಇಂತಹ ಉಸಿರು ಕಟ್ಟುವಂತಹ ಪರಿಸ್ಥಿತಿ ಬಂದಿರಲಿಲ್ಲ. ಈ ವಿಷಯವನ್ನು ಇವತ್ತೇ 159ರ ನಿಯಮದ ಕೆಳಗೆ ಚರ್ಚೆ ಮಾಡುವುದಕ್ಕೆ ತೆಗೆದುಕೊಂಡರೆ, ನಾವು ಇನ್‌ಫರ್ಮೇಷನ್ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ನಾವು ಇಲ್ಲಿ ಏಕೆ ಕುಳಿತಿರಬೇಕು. ನನಗೆ ಈ ಕಾರು, ಬಂಗಲೆ ಎಲ್ಲಾ ಬೇಡ ಸ್ವಾಮಿ. ಎಲ್ಲವನ್ನೂ ನಾನು ವಾಪಸ್ಸು ಕೊಡುತ್ತೇನೆ. ನನಗೆ ಯಾವ ಸವಲತ್ತುಗಳು ಬೇಡ. ನಾನು ಈ ರೀತಿ ಅವಮಾನ ಮಾಡಿಕೊಂಡು ಏಕೆ ಇರಬೇಕು? ಈಗಲೇ ಚರ್ಚೆಗೆ ತೆಗೆದುಕೊಳ್ಳಿ, ನಾವು ಸಿದ್ಧರಿದ್ದೇವೆ ಎನ್ನುವಂತಹ ವಿನಂತಿಯನ್ನು ತಮಗೆ ಮಾಡುತ್ತಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾಳೆ ಪ್ರಶ್ನೋತ್ತರ ಆದಮೇಲೆ ಮಾನ್ಯ ಮುಖ್ಯ ಮಂತ್ರಿಯವರ ಒಪ್ಪಿಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ನಾವು ಇವತ್ತು ಅವರನ್ನು ಕರೆದು ಸಮಯ ನಿಗದಿ ಮಾಡುತ್ತೇವೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಹಲ್ಲಿನ ನೋವು ಇರುವುದರಿಂದ ವೈದ್ಯರ ಹತ್ತಿರ ಹೋಗುತ್ತಿದ್ದಾರೆ. ಅದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು.

ಶ್ರೀ ಹೆಚ್.ಡಿ. ದೇವೇಗೌಡ : ನನಗೆ ಈಗ ನಿಮ್ಮ ಭಾಷಣ ಕೇಳುವುದಕ್ಕೆ ಆಗುವುದಿಲ್ಲ. ತಾವು ಅನುಮತಿ ಕೊಟ್ಟರೆ ಹೋಗುತ್ತೇನೆ.

(2) ಕಾನೂನು ಸುವ್ಯವಸ್ಥೆ ಬಗ್ಗೆ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಕಳೆದ 3 ತಿಂಗಳಲ್ಲಿ ಜನತಾ ದಳದ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಅನೇಕ ಕಡೆ ಗಲಾಟೆ ಮತ್ತು ದರೋಡೆ ಮತ್ತು....

ಶ್ರೀ ಕೆ.ಎನ್. ನಾಗೇಗೌಡ : ನೀವು ಇದ್ದಾಗ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಇದ್ದಾಗ ಇತ್ತು. ಆದರೆ ಎಲ್ಲೋ ಕೆಲವು ಅಷ್ಟೇ. ಇದು ಜನತಾದಳದ ಸರ್ಕಾರ ಬಂದಮೇಲೆ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದು ಯಾವ ಪ್ರಮಾಣದಲ್ಲಿ ಆಗುತ್ತಿದೆ ಹಾಗೂ ಇದಕ್ಕೆ ತಾವು ಯಾವ ರೀತಿಯಲ್ಲಿ ಕಾನೂನು ವ್ಯವಸ್ಥೆಯನ್ನು ನಡೆಸುತ್ತಿದ್ದೀರಿ ಎನ್ನುವುದು ಬಹಳ ಮುಖ್ಯ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಮತ್ತು ಹೈವೇಗಳಲ್ಲಿ ಆಗತಕ್ಕಂಥ ದರೋಡೆಗಳು ಮತ್ತು...

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಲಾ ಅಂಡ್ ಆರ್ಡರ್ ಬಗ್ಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಿರುವುದರಿಂದ ಇದರ ಬಗ್ಗೆ ವ್ಯಾಪಕವಾದಂತಹ ಚರ್ಚೆ ಆಗಬೇಕಾಗುತ್ತದೆ. ಇದರಲ್ಲಿ ನಾವು ಎಲ್ಲರೂ ಸಹ ಭಾಗವಹಿಸಬೇಕಾಗುತ್ತದೆ. ಆದುದರಿಂದ ತಾವು ನಮಗೆ ಒಂದು ನಿಯಮದ ಕೆಳಗೆ ಅವಕಾಶ ಮಾಡಿಕೊಟ್ಟರೆ ಅದಕ್ಕೆ ನಾವೆಲ್ಲರೂ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದಕ್ಕೆ ಅವರೂ ಕೂಡ ಸಪೋರ್ಟ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿ ಕೊಳ್ಳಲಿ. ಅನೇಕ ಕಡೆ ಬೆಂಗಳೂರು ನಗರದಲ್ಲೂ ಕೂಡ ರೌಡಿಗಳ ಹಾವಳಿಗಳು, ಮತ್ತು ಖೂನಿಗಳು, ಹೆದ್ದಾರಿಗಳಲ್ಲಿ ದರೋಡೆಗಳು, ಅನೇಕ ಮನೆಗಳ ಲೂಟಿ ಇವೆಲ್ಲವೂ ಕೂಡ ಕಳೆದ 3 ತಿಂಗಳಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆದಿವೆ. ಅದಕ್ಕೆ ಇವತ್ತು ಪುಷ್ಪಿ ಆಗತಕ್ಕಂಥ ರೀತಿಯಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದಂತಹ 22ನೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ರಸ್ತೆ ದರೋಡೆ ಎಷ್ಟು ಎಂದರೆ 13, ರಸ್ತೆ ಲೂಟಿ ಎಂದರೆ 44, ರೌಡಿಗಳ ದಾಂದಲೆ 7 ಪ್ರಕರಣ ಎನ್ನುವ ಅಂಕಿ ಸಂಖ್ಯೆಗಳನ್ನು ಕೆಲವು ಕಡೆ ಕೊಟ್ಟಿದ್ದಾರೆ. ಆದರೆ ಇನ್ನು ಕೆಲವೊಂದು ಅಂಕಿ ಸಂಖ್ಯೆಗಳು ಬಂದಿಲ್ಲ. ಅವುಗಳು ಚುನಾವಣೆಯಲ್ಲಿ ಆದಂತಹ ಘರ್ಷಣೆಗಳು, ತದನಂತರ ಆದರ ಘರ್ಷಣೆಗಳು, ಮತ್ತು ಅನೇಕ ಕಡೆ ಆದಂತಹ ಖೂನಿಗಳು ಇದರ [illegible] ಮಾಹಿತಿಯೂ ಕೂಡ ಇದರಲ್ಲಿ ಇಲ್ಲ.